ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ಕಾಳು ಮೆಣಸಿಗೆ ಆರ್.ಎಂ.ಸಿ. ವತಿಯಿಂದ ವಿಧಿಸುತ್ತಿರುವ ಸೆಸ್ ಅನ್ನು ತೆಗೆದು ಹಾಕುವ ಕುರಿತು

ಶ್ರೀಮತಿ ವೀಣಾ ಅಚ್ಚಯ್ಯ ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು):-

145 (196) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾಳು ಮೆಣಸಿಗೆ ಆರ್.ಎಂ.ಸಿ. ವತಿಯಿಂದ 1.5% ಸೆಸ್ ವಿಧಿಸುತ್ತಿರುವುದರಿಂದ, ಬೆಳೆ ಹಾನಿ ಹಾಗೂ ಬೆಳೆ ಕುಸಿತದಿಂದ ಈಗಾಗಲೇ ಕಂಗೆಟ್ಟಿರುವ ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸೆಸ್ ವಿಧಿಸುತ್ತಿರುವುದನ್ನು ಕೈಬಿಡಲಾಗುವುದೇ ;

(ಇ) ಯಾವ ಕಾಲಮಿತಿಯೊಳಗೆ ಈ ಕುರಿತು ಕ್ರಮ ಕೈಗೊಂಡು, ತೀವ್ರ ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಲಾಗುವುದು ?